RNU AIR DHARWAD

NOVEMBER 04, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಪಶ್ಚಿಮಘಟ್ಟದ ಮರಗಳನ್ನು ಏರಬಲ್ಲ, ವಿಶಿಷ್ಟ ಮರಗಂತಿ ಕಪ್ಪೆ – ಮಲಬಾರ್ ಟ್ರೀ ಟೋಡ್, ವನ್ಯಜೀವಿ ಸಂರಕ್ಷಣಾ ಕಾಯ್ದೆ – 1972ರ, 11ನೇ ಪರಿಚ್ಛೇದದಲ್ಲಿ ಸಂರಕ್ಷಿತ, ಅಪರೂಪದ ಉಭಯಜೀವಿ. ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕದ ರಾಜ್ಯ ಕಪ್ಪೆಯಾಗಿ, ಘೋಷಿಸಿದೆ. ಕಪ್ಪೆಗಳ ಅಧ್ಯಯನದಲ್ಲಿ ತೊಡಗಿರುವ, ವಿಶ್ವ ಖ್ಯಾತಿಯ ಕಪ್ಪೆ ಸಂಶೋಧಕ, ಬೆಂಗಳೂರಿನ, ಸೃಷ್ಟಿ ಮಣಿಪಾಲ, ಉನ್ನತ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕ, ಡಾಕ್ಟರ್ ಕೆ.ವಿ. ಗುರುರಾಜ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಡಾ. ಕೆ.ವಿ. ಗುರುರಾಜ ಧ್ವನಿ 45 ಸೆಕೆಂದುಗಳು

<><><>

ರಾಷ್ಟ್ರಕವಿ, ಗೋವಿಂದ ಪೈ ಸಂಶೋಧನಾ ಕೇಂದ್ರ ನೀಡುವ, 2025ನೇ ಸಾಲಿನ ಪುರಸ್ಕಾರಕ್ಕೆ, ಪುರಾತತ್ವವಿದ ಎಂ.ಎಸ್. ಕೃಷ್ಣಮೂರ್ತಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ಒಂದು ಲಕ್ಷ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದ್ದು, ಟಿ.ವಿ. ಮೋಹನದಾಸ ಪೈ ಅವರು, ಈ ದತ್ತಿ ನಿಧಿ ಸ್ಥಾಪಿಸಿದ್ದಾಗಿ, ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿ, ಬಿ. ಜಗದೀಶ ಶೆಟ್ಟಿ ತಿಳಿಸಿದ್ದಾರೆ.

<><><>

ದೇಶದಲ್ಲಿ ಪ್ರಕಟವಾಗುವ, ಶೇಕಡ 70 ರಷ್ಟು ಸಂಶೋಧನಾ ಪ್ರಬಂಧಗಳಲ್ಲಿ, ಕರ್ನಾಟಕ ಮತ್ತು ತಮಿಳುನಾಡು ಅಗ್ರ ಪಂಕ್ತಿಯಲ್ಲಿವೆ ಎಂದು, ಹೊಸ ದಿಲ್ಲಿಯ, ನೀತಿ ಆಯೋಗದ ವರದಿ, ತಿಳಿಸಿದೆ. ಕಳೆದ ವರ್ಷ ಪ್ರಕಟಗೊಂಡ, 2 ಲಕ್ಷ 23 ಸಾವಿರ ಸಂಶೋಧನಾ ಪ್ರಬಂಧಗಳಲ್ಲಿ, ಕರ್ನಾಟಕದಿಂದ 27 ಸಾವಿರದ 9 ನೂರಾ 70 ಪ್ರಬಂಧಗಳು ಪ್ರಕಟಗೊಂಡಿದ್ದು, 8 ಸಾವಿರದ 4 ನೂರಾ 13 ಪೇಟೆಂಟ್‌ಗಾಗಿ, ಅರ್ಜಿಗಳು ಸಲ್ಲಿಕೆಯಾಗಿವೆ.

<><><>

ದೇಸಿ ಬಿತ್ತನೆ ಬೀಜ ತಳಿ ಸಂಶೋಧನೆ ಹಾಗೂ ಸಂರಕ್ಷಣೆಯಲ್ಲಿ ತೊಡಗಿರುವ, ಹಾಗೂ ಮೂರು ವಿಶಿಷ್ಟ ಭತ್ತದ ತಳಿ ಸಂಶೋಧಿಸಿರುವ, ಮಂಡ್ಯ ಜಿಲ್ಲೆ, ಮದ್ದೂರು ತಾಲೂಕು, ಗೂಳೂರುದೊಡ್ಡಿಯ, ಸಾವಯವ ಕೃಷಿಕ, ಸಿ.ಪಿ. ಕೃಷ್ಣ, ಕೇಂದ್ರ ಕೃಷಿ ಸಚಿವಾಲಯದ, 'ಪ್ಲ್ಯಾಂಟ್ ಜೀನೋಮ್ ಸೇವಿಯರ್, ಫಾರ್ಮರ್ ಅವಾರ್ಡ್' – ರಾಷ್ಟ್ರೀಯ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ರಾಗಿ, ಭತ್ತ ಹಾಗೂ ಸಾಮೆ ತಳಿ ಸಂಶೋಧಿಸಿ, ಅದಕ್ಕೆ ಸಿ.ಪಿ.ಕೆ. ಎಂದು, ಅವರು ನಾಮಕರಣ ಮಾಡಿದ್ದಾರೆ.

<><><>

ಬೆಂಗಳೂರಿನ ಮೆಟ್ರೋ ಪಿಂಕ್ ಲೈನ್‌ಗೆ, ಈ ತಿಂಗಳ 13ನೇ ತಾರೀಖು, ಪ್ರಧಾನಮಂತ್ರಿ ನರೇಂದ್ರ ಮೋದಿ ಚಾಲನೆ ನೀಡಲಿದ್ದಾರೆ ಎಂದು, ಬಿಜೆಪಿ ಸಂಸದ ತೇಜಸ್ವಿಸೂರ್ಯ, ಹುಬ್ಬಳ್ಳಿಯಲ್ಲಿ ತಿಳಿಸಿದ್ದಾರೆ. ಬೆಂಗಳೂರು–ಮುಂಬೈ ನಡುವೆ, ಹುಬ್ಬಳ್ಳಿ ಮಾರ್ಗವಾಗಿ, ವಂದೇ ಭಾರತ ಸ್ಲೀಪರ್ ಬುಲೆಟ್ ರೈಲು, ಶೀಘ್ರ ಆರಂಭವಾಗಲಿದೆ ಎಂಬ, ವಿಶ್ವಾಸ ಅವರು ವ್ಯಕ್ತ ಪಡಿಸಿದರು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ವರಕವಿ ಡಾ. ದ.ರಾ. ಬೇಂದ್ರೆ ಅವರ, ಸಾಧನಕೇರಿ ನಿವಾಸ ಶ್ರೀ ಮಾತಾಕ್ಕೆ ಸಂಸದರು ಭೇಟಿ ನೀಡಿದರು.

<><><>

"ಹಳ್ಳಿಗಳಲ್ಲಿ ಶೌಚಾಲಯಗಳನ್ನು ಕಟ್ಟಿದ್ದೇವೆ: ಕಟ್ಟಿದ ಶೌಚಾಲಯಗಳ ಸಂಖ್ಯೆಯಲ್ಲ, ಬಳಸುತ್ತಿರುವ ಕುಟುಂಬಗಳ ಸಂಖ್ಯೆಯೇ, ಯೋಜನೆಯ ಯಶಸ್ಸಿನ ಅಳತೆಗೋಲು" ಎಂದು, ವಿಧಾನಸಭಾಧ್ಯಕ್ಷ ಜಿ.ಎಸ್. ಪಾಟೀಲ, ಅಭಿಪ್ರಾಯಪಟ್ಟಿದ್ದಾರೆ. ಗದಗ ಜಿಲ್ಲೆ ರೋಣದ, ಕನ್ನಡ ಸಾಹಿತ್ಯ ಭವನದಲ್ಲಿ, 'ಬಯಲುಶೌಚ ಮುಕ್ತ ಸುಸ್ಥಿರತೆ' ಕಾರ್ಯಯೋಜನೆ ಕಾರ್ಯಾಗಾರಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

<><><>

ನಿಧನ ವಾರ್ತೆ

<><><>

ಉಡುಪಿ ತಾಲೂಕು, ತೆಂಕನಿಡಿಯೂರು ಮೂಲದ, ಖ್ಯಾತ ವಿಜ್ಞಾನಿ ಹಾಗೂ ಸಾಹಿತಿ, ಡಾಕ್ಟರ್ ವ್ಯಾಸರಾವ ನಿಂಜೂರ, ವಯೋಸಹಜ ಕಾಯಿಲೆಯಿಂದ, ನಿನ್ನೆ ಮುಂಬೈಯಲ್ಲಿ ನಿಧನರಾಗಿದ್ದಾರೆ. ಅವರಿಗೆ 86 ವರ್ಷ ವಯಸ್ಸಾಗಿತ್ತು. ಬಾಬಾ ಪರಮಾಣು ಸಂಶೋಧನಾ ಕೇಂದ್ರದಲ್ಲಿ, ಪ್ರಮುಖ ಹುದ್ದೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಅವರು, ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ನಾಟಕ ಅಕಾಡೆಮಿ ಫೆಲೋಶಿಪ್‌ಗೆ ಭಾಜನರಾಗಿದ್ದರು. ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ, ಡಾಕ್ಟರ್ ನಾಗಲಕ್ಷ್ಮೀ ಚೌಧರಿ ಅವರು, ಇಂದಿನಿಂದ ಮೂರು ದಿನಗಳ ಕಾಲ, ವಿಜಯನಗರ ಜಿಲ್ಲೆ ಪ್ರವಾಸ ಕೈಗೊಂಡಿದ್ದಾರೆ. ಜಿಲ್ಲೆಯ 13 ಗಣಿಬಾಧಿತ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿನ ಮಹಿಳೆಯರ ಸ್ಥಿತಿಗತಿ ತಿಳಿಯಲಿದ್ದಾರೆ. ಮರಿಯಮ್ಮನಹಳ್ಳಿಯ ವಿನಾಯಕ ಶಾಲೆ ಆವರಣದಲ್ಲಿ, ಸಂಚಾರಿ ಕುರಿಗಾಹಿ ಮಹಿಳೆಯರೊಂದಿಗೆ, ಅವರ ಸಂವಾದ ಸಭೆ ನಿಗದಿಯಾಗಿದೆ.

<><><>

ಮುರಸು ಚಂಡಮಾರುತದ ಪರಿಣಾಮ, ರಾಜ್ಯದ ಕರಾವಳಿ ಹಾಗೂ ಒಳನಾಡಿನ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ, ಮಳೆಯಾಗುವ ಸಾಧ್ಯತೆ ಇದೆ. ಹವಾಮಾನ ಇಲಾಖೆ ಮುನ್ಸೂಚನೆಯಂತೆ, ನಾಳೆಯ ವರೆಗೆ, ರಾಜ್ಯದ ವಿವಿಧೆಡೆ ಬಿರುಗಾಳಿ ಬೀಸುವ ಸಾಧ್ಯತೆಯಿದ್ದು, ಸಮುದ್ರದಲ್ಲಿ ಅಲೆಗಳ ಅಬ್ಬರ ಹೆಚ್ಚುವ ನಿರೀಕ್ಷೆ ಇದೆ. ಕರಾವಳಿ ಭಾಗಗಳಲ್ಲಿ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.